ದಿನಾಂಕಃ 16-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿಗಳ ಪರ ವಕೀಲರಿಂದ,

1) ಕರಿಸಣ್ಣೇಗೌಡ ರವರಿಗೆ ಮೂರು ಜನ ಮಕ್ಕಳು ಎಂದರೆ ಸರಿ. ಕರಿಸಣ್ಣೇಗೌಡ ರವರಿಗೆ ಎಷ್ಟು ಆಸ್ತಿಯ ವಿಸ್ತೀರ್ಣ ಇತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಸರ್ವೇ ನಂ. 290 ರಲ್ಲಿ ನನ್ನ ಹೆಸರಿಗೆ 2 ಎಕರೆ 5 ಗುಂಟೆ ಖಾತೆ ಇರುತ್ತದೆ ಎಂದರೆ ಸರಿ. ಅದೇ ರೀತಿ ಸರ್ವೇ ನಂ. 289 ರಲ್ಲಿ 1 ಎಕರೆ 12 ಗುಂಟೆ ಆಸ್ತಿಯ ಖಾತೆ ನನ್ನ ಹೆಸರಿಗೆ ಇರುತ್ತದೆ. ನಾನು ಕಂದಾಯ ದಾಖಲಾತಿಗಳಲ್ಲಿ ನಮೂದಾಗಿರುವ ವಿಸ್ತೀರ್ಣದಲ್ಲಿ ಮಾತ್ರ ಸ್ವಾಧೀನ ಇರುತ್ತೇನೆ ಎಂದರೆ ಸರಿಯಲ್ಲ. ಸುಮಾರು 30 ವರ್ಷಗಳ ಹಿಂದೆ ಕರಿಸಣ್ಣೇಗೌಡ ರವರ ಆಸ್ತಿಯನ್ನು ಮೂರು ಜನ ವಾರಸುದಾರರು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

2) ಪ್ರತಿವಾದಿಗಳ ಮುತ್ತಜ್ಜಿ ಪುಟ್ಟೀರಮ್ಮ ರವರಿಗೆ ದಾನ ಪತ್ರರದ ಮೂಲಕ ಬಂದಿರುವ ಆಸ್ತಿಯನ್ನು ಲಪಟಾಯಿಸುವ ಸಲುವಾಗಿ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಪುಟ್ಟೀರಮ್ಮ ರವರ ಆಸ್ತಿಯಲ್ಲಿ ಅವರ ವಾರಸುದಾರರು ಸ್ವಾಧೀನ ಇರುತ್ತಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ